

‘ಇದೊಳ್ಳೆ ಐನಾತಿ ಕೇಸು. ಸೋದರತ್ತೆಗೆ ಏನಾದರೂ ಸಹಾಯ ಮಾಡಬಹುದು’ ಎನಿಸಿತು.

‘ಹ್ಯಾಗೂ ಮುದುಕಿ ಸಾಯುವ ಹಂತದಲ್ಲಿದೆಯಲ್ಲಾ. ಅದನ್ನುಹೇಗಾದರೂ ಮಾಡಿ ಕರೆದುಕೊಂಡು ಬಂದು ಸಾಯುವವರೆಗೂ ನಿಮ್ಮ ಮನೆಯಲ್ಲೇ ಇಟ್ಟುಕೊಂಡುಬಿಡಿ.ಮುದುಕಿಯನ್ನುಸಾಯುವವರೆಗೂ ಯಾರು ಇಟ್ಟುಕೊಂಡು ಸಾಕುತ್ತಾರೋ ಅವರಿಗೆ ಕೆರೆ ಏರಿಯ ಕೆಳಗಿನ ಜಮೀನು ಎಂದು ಮಾತಲ್ಲವೇ. ನೀವು ನಾನು ಹೇಳಿದಷ್ಟು ಮಾಡಿ. ಮುಂದಿನದು ನಾನು ನೋಡಿಕೊಳ್ಳುತ್ತೇನೆ’ ಎಂದ.

ಹಾಸಿಗೆ ಬಿಟ್ಟೇಳಲಾರದ ಮುದುಕಿಯನ್ನು ಹೇಗೆ ಕರೆತರುವುದು? ಯೋಚಿಸಿದ ಅವಳು ತೌರಿನಿಂದ ಅಣ್ಣನನ್ನು ಬರಮಾಡಿಕೊಂಡಳು. ಗಂಡನನ್ನು ಜೊತೆಮಾಡಿ ಮೈದುನನ ಮನೆಗೆ ಕಳಿಸಿದಳು. ಮುದುಕಿಯೊಂದೇ ಮನೆಯಲ್ಲಿ ಮಲಗಿತ್ತು. ಅದನ್ನು ಒಂದು ಕಂಬಳಿಯಲ್ಲಿ ಸುತ್ತಿ ತಲೆ ಕಡೆ ಒಬ್ಬರು, ಕಾಲು ಕಡೆ ಒಬ್ಬರು ಹೊತ್ತುಕೊಂಡು ಊರ ಕಡೆ ನಡೆದೇಬಿಟ್ಟರು. ಸಂಜೆ ತೋಟದಿಂದ ಬಂದ ಮಂಜುನಾಥ ದಂಪತಿ ಮುದುಕಿಯನ್ನು ಕಾಣದೆ ಗಾಬರಿಯಾದರು. ಕೇಳೋಣವೆಂದರೆ ಆಸುಪಾಸಿನಲ್ಲಿ ಯಾವುದೇ ಮನೆ ಇಲ್ಲವಲ್ಲ. ಏನು ಮಾಡಬೇಕೆಂದು ತೋಚದೆ ಊರ ಕಡೆ ದಾರಿಯಲ್ಲಿ ಓಡತೊಡಗಿದ. ಆಸ್ಪತ್ರೆಯ ಬಳಿ ಎದುರಾದ ಕಾಂಪೌಂಡರ್ ‘ನಿಮ್ಮ ಅಣ್ಣ ಮತ್ತು ಇನ್ನೊಬ್ಬರು ಯಾರೋ, ಕಂಬಳಿಯಲ್ಲಿ ಸುತ್ತಿಕೊಂಡು ಯಾರನ್ನೋ ಊರ ಕಡೆ ಹೊತ್ತುಕೊಂಡುಹೋದರು’ ಎಂದು ಹೇಳಿದ. ಇದು ತನ್ನ ಅತ್ತಿಗೆಯದೇ ಏನೋ ಹುನ್ನಾರ ಎಂಬುದು ಅವನಿಗೆ ಅರಿವಾಯಿತು. ಜೊತೆಗೆ ನಾಲ್ಕು ಜನ ಸೇರಿಸಿಕೊಂಡು ಆ ಕಡೆ ಓಡಿದ. ಅತ್ತಿಗೆ ಮುದುಕಿಯನ್ನು ಬಿಟ್ಟುಕೊಡಲು ಸಿದ್ಧಳಿರಲಿಲ್ಲ. ನೂಕಾಟ, ತಳ್ಳಾಟದ ನಂತರ, ಮಂಜುನಾಥ ತಂದು ಹೊರಗಡೆ ನಿಲ್ಲಿಸಿಕೊಂಡಿದ್ದ ಆಟೋದಲ್ಲಿ ಮುದುಕಿಯನ್ನು ತುಂಬಿಕೊಂಡು ವಾಪಾಸು ಮನೆಗೆ ಕರೆದುಕೊಂಡು ಹೋಗುವಲ್ಲಿ ಯಶಸ್ವಿಯಾಗಿದ್ದ.

ಚಾಂಡಿ ಸುಮ್ಮನಿರುತ್ತಾಳೆಯೇ. ಮರುದಿನ ಮತ್ತೊಂದಷ್ಟು ಜನ ಸೇರಿಸಿಕೊಂಡು ದೇವರಬನಕ್ಕೆ ಹೋಗಿ, ಇಬ್ಬರೇ ಇದ್ದ ಗಂಡಹೆಂಡಿರನ್ನು ತೋಳ್ಬಲದಿಂದ ಮಣಿಸಿ, ಮುದುಕಿಯನ್ನು ಚಾಪೆಯಲ್ಲಿ ಸುತ್ತಿಕೊಂಡು ವಾಪಾಸು ತನ್ನ ಮನೆಗೆ ಹೊತ್ತು ತರಿಸಿಯೇಬಿಟ್ಟಳು.

ಮರುದಿನ ಹಂಚಿನಮನೆ ಬಡ್ಡೆಯ ಕುಟುಂಬಸ್ಥರೆಲ್ಲಾ ಕುಂಜೇಗೌಡರ ನೇತೃತ್ವದಲ್ಲಿ ಸಭೆ ಸೇರಿದರು. ಇಷ್ಟು ವರ್ಷ ಜೊತೆಗಿಟ್ಟುಕೊಂಡು,ಎಲ್ಲಾ